**ವೆಂಕಮ್ಮ** :—ಹೂಂ.

**ಕಿಟ್ಟು** :—( ಹೆಬ್ಬಾಗಿಲ ಕಡೆ ತಿರುಗಿ ) ಅಕ್ಕೋ ಅಪ್ಪ ಬಂದ...ಮುಖಾನ್ನೋಡಿದ್ರೆ, ಬ್ರಾಹ್ಮಣ್ರು ಸಿಕ್ಕಿದ್ಹಾಗ್ಯೇ ಕಾಣುತ್ತೆ; ನಾಸಿನ್ ಸ್ನಾನಕ್ಕೊರಡ್ತೇನಪ್ಪಾ! ಹಂಡೇಲ್ನೀರಿಧೆ ತಾನೆ?

**ವೆಂಕಮ್ಮ** :—ಹೂಂ ಸೀರೂ ಸೇದಿ...ಹಂಡೇನೂ ತುಂಬಿ..., ಕಟ್ಗೇನೂ ತಾನೇ ಪಡ್ಕ....ಕಾಸಿಟ್ಟಿದಾಳೆ....ನಡ್ಯ....

[ಕಿಟ್ಟು ನಿಷ್ಕ್ರಮಿಸುವನು. ರಂಗಣ್ಣನು ಪ್ರವೇಶಿಸುವನು.]

**ವೆಂಕಮ್ಮ** :—ಸಿಕ್ಕಿದ್ರೇ...ಬ್ರಾಹ್ಮಣ್ರು?

**ರಂಗಣ್ಣ**:—(ಏಗತಾಳಿಯಿಂದ)ಸಿಕ್ಕಿದ್ರಾಂದು.... ಆದ್ರುವ್ರು... ಬ್ರಾಹ್ಮಣ್ರೋ! ಅಲ್ಲೋ! ನನಗಿನ್ನೂ....ಸಂದೇಹವೇ!

**ವೆಂಕಮ್ಮ** :—(ಆತುರದಿಂದ) ಇದೇನಿದೂ?....ಅರ್ಥ್ವಾಗ್ಲಿಲ್ಲ ನನ್ಗೆ....ಯಾರದು ವೊಪ್ಕೊಂಡಿರೋದೂ . . . . ನಮ್ಮೂರಲ್ಲೀ? . . . .ನಮಗ್ತಿಳೀದವ್ರು?

**ರಂಗಣ್ಣ**:—ಯಾರೇನೂ? (ತಾತ್ಸಾರವಾಗಿ)ಈ ವೂರ್ನೋ ರೂಂಬೋ ಚಪ್ಲ....ಇನ್ನೂ ಇಟ್ಕೊಂಡಿದಿಯಾ ನಿಸ್ಮನಸ್ನಲ್ಲಿ?....ಬೆಳಗ್ಗಿಂದಾ ತಿರ್ಗಿ ತಿರ್ಗಿ .... ವೂರ್ನಾಚಕ್ಲ ಸೇರಿ ... ಸುಂಕದ್ಕಟ್ಟೇಲೊಕ್ತಿದ್ದೆ....ಕಾಲ್ಹೋತು....ಬಂದ್ಸೇರಿದ್ರುಬ್ರು ಪರಸ್ಥಳ್ದ ಬ್ರಾಹ್ಮಣ್ರು.... ಕೇಳಿದರ್ಯಥಾಪ್ರಕಾರ...ವೂರ್ನ್ಯಾಗಿಧೆ, ಮಳೆ ಹ್ಯಾಗೆ, ಜನಸಂಖ್ಯೆ, ಜನಾರೋಗ್ಯ, ಅಮಲ್ದಾರ್ರ ಹೆಸ್ರು. ಕೊನೇಗೂನೂ .... ಯಥಾಪ್ರಕಾರವಾಗ್ಯೇ ಮುಟ್ಸೇ ಮುಟ್ಸಿದ್ರು .... ಪ್ರಶ್ನೇನಾ ....ವೂಟದನ್ಕೊಲ್ದ ವಿಷ್ಯಾನ....ಇನ್ನೇನು ಹೇಳ್ಕೊಂಡೆ ಹಣೇಬರಾನ .. ನಿಮಂತ್ರಣಕ್ಕೇಂತ ಆಡ್ತಿದ್ನನ್ನ ಬ್ರಾಹ್ಮಣ್ರ ಬೇಟೇನಾ! ಇನ್ನೊ ವೊಕ್ಳೋಕೇನವರಿಗಭ್ಯಂತ್ರ! .... ಊರ್ಕಡೆ ಕಾಲ್ಹಾಕ್ತಾ .... ಹಣ್ಕಾಜರೋದು! .... ಸಕ್ರೇಪಟ್ಣದಲ್ಸೀಳೋದು! ....ಹಾಲ್ರಲ್ದುವೊಕ್ಕೋದು, ಅಂಬೋಉಪ್ಮಾನಾನ....ನಾನ್ಹುಡ್ಕಿ ದಣ್ದು ಸುಂಕದ್ಕಟ್ಟೇಲಿ ಕೂತಿ

ದ್ದದ್ದಕ್ಕೂ, ಅವ್ರೂನೂ ಆ ಕ್ಷಣ್ವೇ ಬಂದು ನನ್ನಂಧ್ಸಿದ್ದಕ್ಕೂ
ಹೊಂದಿದ್ದು, ದೈವನಿಯಾಮ್ಕ ಅಂತ ಹೇಳ್ಕೊಳ್ತಾ ಬಂದ್ನೇರಿದ್ವಿ ...
ನಮ್ಜ್ಞಾತಿಗ್ಳ ನರ್ಥದ್ನ .... ಇನ್ನೇನ್ನಿನಗೊತ್ತಿಲ್ಲದ್ದು?.... ಬಂತು....
ಹೋಪ್ಪ್ವರ್ಷ್ದ ಶ್ರಾವ್ಧದ ಚಾನ್ಸ್ಕ .... ಬಂದ್ಬ್ರಾಹ್ಮಣ್ರನ್ನೆಲ್ಲಾ....
ಬಹಿಷ್ಕಾರದ ಗೊಗ್ಗ್ರಯ್ಯನ್ತೋರ್ಸಿ, ಹೆದರ್ಸೋಡ್ಸಿದ್ದು....ಇನ್ನನ್ಜ್ಞಾ
ತಿಗ್ಳ ಬಾಯಿಂದ್ಲೋರಟು ಅವ್ರು ತಿಳ್ಕೊಳ್ಳೋಕ್ಕಿದ್ಲಾಗಿ . . . ನಾನೇ
ತಿಳ್ಸೋದ್ಮೇಲೂ ಅಂತ ...ನಮ್ಮನೇ ವಿಚಿತ್ರ ಚರಿತ್ರೇನ....ವಿವರ್ಸಿ
ದ್ದಲ್ದೆ .... ಅಪ್ರುಗೂ ಹೇಳ್ದಿ ಬುದ್ಧಿವಾದಾನ .... ಹನಿವಿನ್ಗಲಾಟೇಲಿ
ನಮ್ಮನೇ ನಿಮಂತ್ರಣಕ್ಕೊಪ್ಕೊಂಬಿಟ್ಟು, ಮುಂದ್ಬೀಳ್ವಹುದಾದ ಬಹಿ
ಷ್ಕಾರ್ದ ಅಪಾಯಾನ ಅಪ್ರಿಗೆ ಮೊದ್ಲೇ ತಿಳಿಸ್ದೇ ಇದ್ದಾಪ ನನಗ್ಬೇಡ;
ನಮ್ಜ್ಞಾತಿಗಳ್ನ ವಿಚಾರ್ಸಿ, ನಚ್ಚರಿತ್ರೇನ ಅವರ್ಬಾಯಿಂದಲ್ಲು,
ಆಮೇಲೊಂದ್ವೇಳೆ, ನನ್ನಸ್ಥಿತೀನಾ ಕನಿಕರ್ಸಿ, ಧೈರ್ಯದಿಂದ, ಇವತ್ತಿ
ನ್ಕೆಲ್ಸಾನ್ನಡ್ಸಿಕೊಡೋಕೆ ಒಪ್ಕೋದಾದ್ರೇನೆ ನಮ್ಮನನ್ಸಿಗೆ ನೆಮ್ದಿ
ಅಂತ್ಲೇಳಿ ಕಳ್ಸಿಬಿಟ್ಟು, ಹೃದಯಾ ಬೇಯ್ತಾ, ನಾನ್‌ಹಾಕ್ದಂದಾಜ
ಗ್ಧರ್ಂಟೇ ಮುಂಚೇನೇ ಬಂಪ್ರು ತಿರ್ಗಿ.... ಜಗಗ್ವ್ಯವ್ಹಾರವಿಶೇಷಗ
ಳ್ನೆಲ್ಲಾ ವಿವರ್ನ್ದ್ರು .... ಹೊನ್ದೇನೂ ಇಲ್ಲ....ನನ್ದೊಡ್ಡಪ್ಪನ ಮಗ
ತನ್ನಪ್ಪ್ನೇ ಅಂಗ್ಡೀನೇ ಇವ್ರು ಮುಂದಿಟ್ಟು....ತನ್ಮನೇ ಮೃಷ್ಟಾನ್ನ
ಬಿಟ್ಬಿಟ್ಟು ...''ಈ ವೂರಲ್ಲಿ ಜಾತ್ಗೆಟ್ಟ ರಂಗಣ್ಣನ್ಮನೇಲಿ ತಿಂದ್ಭ್ರಷ್ಟಾನ್ನ
ನಿಮ್ಕೃಗೊಗ್ಗೀತೇ?.... ಮತ್ತೆ ಮುಂದ್ಸಂಭವ್ಸೋ ಬಹಿಷ್ಕಾರಾನೂ
ತಪ್ಪೀತೇ ನಿಮ್ಗೆ....ಇಲ್ಲ, ಆ ಮನೆ ಧೋತ್ರದ್ಮೇಲೇನಾದ್ರೂ ಚಪ್ಲ
ಬಿದ್ಪಕ್ಷಕ್ಕೆ ...ನನ್ನಂಗ್ಡೀಲಿ ನಿಮಗ್ಬೇಕಾದ್ವಸ್ತ್ರಗಳ್ನ ನೀವಾರ್ಸಿಕೊಂ
ಡದ್ರಿಂದ ನನಗೇನೂ ನಷ್ಟವಿಲ್ಲ....ಇನ್ನಿದನ್ಮೇಲೆ .... ನೀವಲ್ಲೀ
ಹೊಗೋದಾದ್ರೆ .... ನಿಮ್ಮೂರ್ನೀವು ಮುಟ್ಟೋಕ್ಮುಂಚೆ ನಿಮ್ಮೇ
ಪ್ರತಾಪ ನಿಮ್ಮೂರ್ತಲ್ಪೋ ಪಷ್ಯದಲ್ಲೇನೂ ಸಂದೇಹ ಇಟ್ಕೊ
ಳ್ಬೇಡೀ'' ಅಂದದ್ನೂ, ಮತ್ತಿವ್ರು ತಲೇಕೆರೀತ....ಜನಿವಾರಗಳ್ನೀವಾತ್ತಾ,
ನ್ಯಾಯಾನ್ಯಾಯಗಳ್ನಾಲೋಚ್ಸಿ "ನಿಮಂತ್ರಣಕ್ಕೇಂತ .... ಬ್ರಾಹ್ಮ
ಣ್ರನ್ಹುಡುಕ್ತಾ .... ಒಬ್ಗೃಹಸ್ಥ ಕಾದಿರೋವಾಗ .... ಇನ್ನೊಂದ್ಕಡೆ

ಇನ್ಮುಂದೆ ಯಾವ ಬ್ರಾಹ್ಮಣ ಹಣದ್ಮೇಲೆ ಹೇಸ್ಗೆಪಟ್ಕೊಂಡು ಹುಟ್ತಾನೋ, ಪುಣ್ಯಾತ್ಮ, ಅವನ್ಕೈತಿಲೋದ್ಕದ ಯೋಗ್ಯತೇನ, ಹೇಳೋವಕ್ನನಗ್ಹೋಗ್ತೆ ಇಲ್ಲಾ....ಆದ್ರೂಸೂವೇ ಈ ಘಸಕ್ಕಡ್ಬೀಳೋ ಪಾಪೀ ಬಾಯ್ಗೆ ಹುಯ್ಬೇಕಾದ್ದುರ್ಲಂಚಾನ ಆ (ಲಕ್ಷ್ಮಿಯ ಚಿತ್ರಪಟವನ್ನು ತೋರಿಸುತ್ತಾ) ಚಂಚ್ಲಕಟಾಕ್ಷಿ....ಎಷ್ಟು ವರಿಗೆ ವದಗಸ್ತಿರ್ತಾಳೋ ಸವ್ಕೃಗೆ ಅಷ್ಟು ವರಿಗಾದ್ರೂ ಈ ಮಾಮೂಲ್ ಏರ್ಪಾಡ್ಕೆ ಬ್ರಾಹ್ಮಣ್ಕೇನಾದ್ರೂ ಒದಗಸ್ತಿರೋಣ... ನೆನಸೋಣಗ್ನ ....ಧೋತ್ರಾನಾ....ನೆನಸ್ಗೊಣಗ್ನ.

(ಪರದೆಯು ಥಟ್ಟನೆ ಬೀಳುವುದು.)

---

## ಚತುರ್ಥ ರಂಗ.

ಕಾಲ:—ಏಳು ವರ್ಷಗಳ ಅನಂತರ.

**ಸ್ಥಾನ:**—[ಯಥಾಪೂರ್ವಂ; ಕೋಣೆಯಲ್ಲಿರುವ ಸಾಮಾನುಗಳು, ರಂಗಣ್ಣನ ಸ್ಥಿತಿಯು ಬಹುಧಾ ವರ್ಧಿಸಿರುವುದೆಂಬುದನ್ನು ಸೂಚಿಸುವುವು....ದೊಡ್ಡದೊಂದು ನಿಲುಗನ್ನಡಿ; ....ಮೇಜಿನಿಂದ ಪ್ರತ್ಯೇಕವಾಗಿ ವಿಂಗಡಿಸಲ್ಪಟ್ಟಿರುವ ಕೋಣೆಯ ದಕ್ಷಿಣಾಂಶದಲ್ಲಿ ಮಂಚದ ಮೇಲೆ ನರಸು ಜ್ವರದಿಂದ ನರಳುತ್ತಾ ಹೊರಳುತ್ತಿರುವಳು.]

**ನಾಕಮ್ಮ:**—(ಪ್ರವೇಶಿಸಿ) .. (ಮೇಜಿನ ಮೇಲೆ ಬಿದ್ದಿರುವ ಟಪ್ಪಾಲಿನಿಂದ ಬಂದ ಲಕೋಟೆಯನ್ನು ಗಮನಿಸಿ) ಇದೇನ್ರೂಬಗೆರೆ?.... ಹಾಗಾದರೆ ಇಷ್ಟ್ಬೇಗ್ನೆ ಬರದ್ಬಿಟ್ಟಿದಾರೆ ಜವಾಬು !! ಏನೂಂತ ಬರ್ದಿದಾರೋ ಕಾಣೆ!....ಜಾತ್ಕಾನೂ ಕಳ್ಸಿತ್ರಲ್ಲಾ !!....(ಭ್ರುಕುಟಿ ರಚನೆಯನ್ನು ಮಾಡುತ್ತಾ) ಏನೂಂತ ಬರ್ದಾರವ್ರುತಾನೇ....ನಮ್ಮನೇ ಹಣೇಬರ ಹೀಗಿರೋವಾಗ .... ನಮ್ನರ್ರೂನ್ಮದ್ವೆ ಇಲ್ದೆ ಮನೇಲಿಟ್ಕೊಂಡಿರೋವರೆಗೂ ಕನ್ಯಾದಾನ ಯಾರ್ತಾನೆ ಮಾಡ್ಯಾರ್ನಮ್ಕಟ್ಟೊಗೆ? ...ಇನ್ನಿದುವರ್ಗೂ....ನಾಪ್ಪಟ್ಟಿರೋ ಕಷ್ಟಗ್ಳಲ್ದೇ ಇನ್ಯಾವ್ಯಾವವಸ್ಥೆಗಳ್ಕಾದಿವ್ಯೋ ಕಾಣೆ....

**ನರಸು** :—ಹಯ್ಯೋ!....ನನ್ನಾಗ್ಹೋದು!....ಸಾಯೋಕ್ತಯಾರಾಗಿಲ್ವೇ? ಹಾಳು ಜ್ವರ!....ಹಾಳಸ್ಡಾಕ್ಟ್ರು!...ಈ ಹಾಳ್ಡಾಕ್ಟ್ರು ಯಾಕ್ಬಂದ್ರು?!

**ರಂಗಣ್ಣ** :—ಇಸ್ಕಿಟ್ಬ್ಟ ಹಣಾನ....ನನ್ನ, ಪುಟ್ಟಾ ಏನ್ಮಾಡ್ತಾರು? . . . ಆ ಮಕ್ಳು! . . . . . . . . . . . . . .

**ನರಸು** :—ಕಿಟ್ಬ್ಟ ಹಣಾ! ಹಯ್ಯೋ!....

**ರಂಗಣ್ಣ** :—ಇನ್ನರ್ನ ಸತ್ರೂ....ಅವಳ್ಗೆಣಾನ ಈ ಪೂರಲ್ಮಟ್ಬ್ಟಲ್ಲ!!....ಗಳೂಯಿಂದ ಕೂಡ!! . . . . . .

**ನರಸು**:—ನನ್ಮಣಾ ...ಈ ಪಂಭತ್ತುಷೂರ್ಗ ಇಲ್ಲದ್ಡಾಕ್ಟ್ರು, ಈಗ್ಯಾಕ್ಬರ್ಬೇಕು?...

**ರಂಗಣ್ಣ** :—ಇನ್ನುಟ್ಟ ಬೇರೊಂದ್ಯೋಚಿಸಿ, ನಸ್ತಲೇಲಿ.... ಅವಳ್ವಯಸ್ಸಾಗೋ ಬಂಪೊಂದಿವ್ನಾಸೂ,...ನಸ್ತಲೇಲಿ ಬಂದೊಂದ್ನೆರೆ ಕೂದ್ಲು ಹೆಚ್ಚಾತ್ತ ಬರುತ್ತೆ.... ಅವಳ್ಗೀಗೊಂಭತ್ತುವಯಸ್ಸಾಯ್ತು.... ಲಕ್ಷ್ಮೀಪತೀ....ಇನ್ನಾವೆಲ್ಲ ಸತ್ಮೇಲೆ, ಆ ಮಂದ್ಮಗು ಏನ್ಮಾಡೀತು?... (ಭಯಗರ್ಭಿತವಾದ ಸ್ವರದಿಂದ) ಏನೇನಸಾಹುತಗ್ಳು .... ಕಷ್ಟಗ್ಳು ನಮ್ಕುಟುಂಬಕ್ಸಂಭವ್ಸಿದ್ರೂ ಲಕ್ಷ್ಮೀಪತೀ .... ಇನ್ನದೊಂದು .... ಇದ್ವರಗೂ ಆಗಿಲ್ಲ...ಇನ್ನೀ ಮಗು ಯಾವ್ಹುಲೀ ಬಾಯಲ್ಬೀಳತ್ತೋ... ಅದೊಂದ್ಬೇರೆ ಇರೀತಿದೆ, ನಸ್ಪೃದ್ಯಾನ....ಇನ್ನೀ ಹುಲಿಗಳ್ಮಧ್ಯೆ... ಇನ್ನವಳ್ಗತಿಯೇನು?....

**ನರಸು** :—ಹುಲೀಬಾಯ್ಗೆ!....ನಮ್ಪುಟ್ಟಾ....ಹಯ್ಯೋ!....

**ರಂಗಣ್ಣ** :—ಇದಕ್ಕೇ ಲಕ್ಷ್ಮೀಪತೀ! ನಾನ್ನಾಯ್ಯಾಬರುದ್ದ ಅಂದದ್ದು....ಇವೆಲ್ಲಾ ಬಬ್ರ್ಬಾಗ್ಸತ್ತು, ಸ್ಮಶಾನಕ್ಕವರನ್ನಾಗ್ಸಿ, ಬೂದೀ ಮಾಡಿ....ನಸ್ಥತ್ರಿರೋಹಣ! ...ಐದ್ಸಾವಿರ್ರೂಪಾಯಿ cash ಇದೆ ಲಕ್ಷ್ಮೀಪತೀ! ನಸ್ಥತ್ರೀಗಾ!....ದೇವ್ರುನ್ಮರ್ತು ಧನಪಿಶಾಚಿಯ ಕಾಲ್ಮೇಲೆ ಬಿದ್ದೋರ್ಯಾಡೋ ಗೋಬ್ರಾಹ್ಮಣ್ರುಗೆರಚ್ಬಿಟ್ಟು, ದೇವ್ರೇ! ಇನ್ನನಿಗ್ಯಾವ ಜನ್ಮ ಬಂದ್ರೂ .... ಈ ಹಾಳು ಹಣಕ್ಕಡ್ಬೀಳೋ

**ನರಸು** :—(ಕಿತ್ತುಕೊಂಡು ಕುಡಿದು ಬಿಟ್ಟು) ಸಿಲ್ಲಾರೇ.... ಸಿಲ್ಲಾರೇ....

**ಕಿಟ್ಟೊ** :—(ಮೆಲ್ಲಗೆ ನರಸುವನ್ನು ಎತ್ತಿ ಮಂಚದ ಮೇಲೆ ಮಲಗಿಸುವನು.)

**ನರಸು** :—ಪುಟ್ಟಪ್ಪನ್ನಿಡ್ಕೇಡ....ಅಪ್ನಿಗ್ಹೇಳ್ಬಿಟ್ಟ್ಯಾಳು.

**ಕಿಟ್ಟೊ** :—ಇದ್ಯಾಪ್ಪಪ್ಪಲ್ಪೆ ನರ್ಸು .... ಹೀಗ್ಯಾಕ್ಮಾಡ್ತಹುದೇ ?.... ದೇವ್ರು ಒಪ್ತ್ಯಾನೇ ?

**ನರಸು** :—ಯಾವ್ದೇವ್ರು ? ಕಿಟ್ಟೊ? .... ಗಂಡಸ್ರಿಗಿಧಾನೆ ದೇವ್ರು ; ಹೆಂಗಸ್ರಿಗೆ ...ಗಂಡ್ನೇ ದೇವ್ರು ಅಂತಾರಲ್ಲಾ ದೊಡ್ಡವ್ರು.... ಗಂಡ್ನೇ ಇಲ್ಲದ್ವನಗೆ ದೇವ್ರೆಲ್ಲಿ? ...ನನ್ನಾಪಾನ ಒಪ್ಪೋಕಾಗ್ಲಿ ...ತಪ್ಪೂ ಅನ್ನೋಕಾಗ್ಲಿ, ಗಂಡ್ತಿಲ್ಲದ್ವನಗೆ ದೇವ್ರೆಲ್ಲಿಧಾನೆ?.... ಇನ್ನೀ ನನ್ನಾಪ್ಪಿಂದ, ನಿನಗ್ಯಾಂಪದಕ್ಕಬರೋ ಹೆಂತ್ತೀಗೆ, ದೇವ್ರುನ್ನೂ....ನಾಸ್ಸತ್ಮೇಲೆ ಪುಟ್ಟ್ಯಾಗಾಗೋ ಮದ್ವೆಯಿಂದ ಅವ್ಳಿಗೊಬ್ಬ ದೇವ್ರುನ್ನೂ ...ನಾನ್ಮಾಡ್ಕೊಟ್ಟಾಗೆ ಆಗುತ್ತೆ ...ಕಿಟ್ಟು .... ಇದ್ಯಾಪ್ಪಲ್ಲ ...ಪುಣ್ಯ . ನಾನ್ಹೊಡ್ಡೋಳಾದ್ದು ದೊಡ್ಡ ಪಾಪ ...ಇದ್ವರ್ಗೂ ಬದ್ಕಿದ್ದದ್ದೇ ಪಾಪ ... ಇನ್ನಾನ್ಸಾಯೋದ್ಪುಣ್ಯ ...ಕಿಟ್ಟೀ....ಪುಣ್ಯ! ... ಕಿಟ್ಟೀ .... ಹೋಗ್ತೀದೇನೆ ...ಅಮ್ಮನ್ನೊಂದ್ಸರ್ತಿ ನೋಡ್ಬೇಕೂಂಸ್ಸತ್ತೆ .... ಅಪ್ನಿಗ್ತೀಳೀದ್ಯಾಗೆ, ಮೆಲ್ಲಗ್ಕರ್ಕೊಂಬರ್ತೀಯಾ ... ? .... .... .... ....

**ಕಿಟ್ಟೊ** :—(ತನ್ನ ಅಳುವನ್ನು ತಡೆಯುತ್ತಾ) ಹೂಂ....ನರ್ಸು (ನರಸುವಿನ ಕೈಗಳನ್ನು ತೆಗೆದುಕೊಂಡು ಕಣ್ಣಿಗೆ ಒತ್ತಿಕೊಂಡು ಅಳುವನು.)

**ನರಸು** :—ಅತ್ತೀನ್ಸ್ರಯೋಚ್ನ ? ಕಿಟ್ಟೀ ...ಅಜ್ಜಿ ಸತ್ತಾಗ್ನಿಂದ ....ಅಳುನಲ್ಲೇ ಮುಳ್ಗಿರೋ ನಮ್ಮನೇಲಿ ...ಇವತ್ನಿಂದ ಆನ್ರೂ... ಅಳು ಅಡಗ್ಲಿ ...ಕಿಟ್ಟೂ....(ಕಿಟ್ಟೊವಿನ ಮುಖವನ್ನು ತನ್ನ ಮುಖದ ಹತ್ತಿರಕ್ಕೆಳೆದುಕೊಂಡು, ಅವನ ಹಣೆಗೆ ಮುದ್ದಿಡುವಳು) ಕಿಟ್ಟೀ .... ನಮ್ಕಿಟ್ಟಿ....ಅಮ್ಮನ್ಕರೀ....ರಾಜ....ನೋಡ್ಬಿಟ್ಟೊಹೋಗ್ತೀನಿ.

[**ಕಿಟ್ಟಯು ಅಳುತ್ತ ನಿಷ್ಕ್ರಮಿಸುವನು.**]

